OS 122/2019
ಪಿಡಬ್ಲೂ-2

ದಿಃ 25/07/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ.ಎನ.ಕೆ.ಕೆ.ವಕೀಲರಿಂದಃ**

ನನ್ನ ಬಳಿ ರೇಷನ ಕಾರ್ಡ ಇದೆ. ಅದನ್ನು ಹಾಜರು ಮಾಡಿದ್ದೇನೆ. ಸದರಿ ಪಡಿತರ ಚೀಟಿಯನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಪಡಿತರ ಚೀಟಿ ಯನ್ನು ಹಾಜರು ಮಾಡಿಲ್ಲ ಎಂದಲ್ಲಿ ಅದನ್ನು ಹಾಜರು ಮಾಡಲು ತೊಂದರೆ ಇಲ್ಲ. ಸದರಿ ಪಡಿತರ ಚೀಟಿ ನನ್ನ ಬಳಿ ಸುಮಾರು 20 ವರ್ಷಗಳಿಂದ ಇದೆ. ಸದರಿ ಪಡಿತರ ಚೀಟಿಯಲ್ಲಿ ನನ್ನ, ನನ್ನ ಗಂಡ ಹಾಗೂ ನನ್ನ ಮೂರು ಹೆಣ್ಣು ಮಕ್ಕಳ ಹೆಸರು ಇದೆ. ನನ್ನ ಬಳಿ ಯಾವುದೇ ಪಡಿತರ ಚೀಟಿ ಇಲ್ಲ ಮತ್ತು ನಾನು ಹೇಳುವಂತೆ ಯಾವುದೇ ಹೆಸರುಗಳು ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ಮತದಾರರ ಪಟ್ಟಿಯಲ್ಲಿ ನನ್ನೊಂದಿಗೆ ಯಾರ ಯಾರ ಹೆಸರು ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮತದಾರರು ಪಟ್ಟಿಯಲ್ಲಿ ಯಾವ ಮನೆಯಲ್ಲಿ ವಾಸ ಇದ್ದ ಬಗ್ಗೆ ನಮೂದು ಇದ್ದು ಆ ಸದರಿ ಮನೆಯ ಮಾಹಿತಿ ಇಲ್ಲ. ಸದರಿ ಮನೆಯನ್ನು ನನ್ನ ತಮ್ಮಂದಿರು ಕಟ್ಟಿರುತ್ತಾರೆ. ಸದರಿ ಮನೆಯ ಮುಂಬಾಗದಲ್ಲಿ ನನ್ನ ತಮ್ಮ ಇದ್ದು ಹಿಂಭಾಗದ ಮನೆಯಲ್ಲಿ ನಾನು ಒಬ್ಬಳೇ ವಾಸವಾಗಿದ್ದೇನೇ. ನಿಪಿ-13 ರಲ್ಲಿ ಮನೆ ನಂಬರ 4339ಬಿ ಎಂದು ನಮೂದು ಇದೆ ಎಂದರೆ ನನಗೆ ಓದಲು ಬರುವುದಿಲ್ಲ. ಸದರಿ ನಿಪಿ-13ಎ ರಲ್ಲಿ ಕಾಣುವ ಪೋಟೋ ನನ್ನದೇ ಆಗಿರುತ್ತದೇ. ಅದೇ ದಾಖಲೆಯಲ್ಲಿ ನನ್ನ ಮಗಳಾದ 2ನೇ ವಾದಿ ನಿಪಿ-13 ಬಿ ಮನೆಯಲ್ಲಿ ವಾಸವಿದ್ದಾರೆ ಎಂದರೆ ಹೌದು. ಸದರಿ ಮನೆ ನಂಬರ 4339 ಮತ್ತು 4339ಬಿ ಮನೆಗಳಿಗೆ 1 ನೇ ಪ್ರತಿವಾದಿ ಯ ಹೆಸರು ನಮೂದು ಆಗಿಲ್ಲ ಎಂದರೆ ಹೌದು.

1 ನೇ ಪ್ರತಿವಾದಿಯ ತಂದೆಯ ಹೆಸರು ಗುರುಲಿಂಗ ಅವರ ತಂದೆಯ ಹೆಸರು ಗೊತ್ತಿಲ್ಲ. 1 ನೇ ಪ್ರತಿವಾದಿಯ ಅಜ್ಜಿಯ ಹೆಸರು ಗೋದಾಬಾಯಿ. ಸದರಿ ಗುರುಲಿಂಗ ರವರಿಗೆ ಮೂರು ಜನ ಗಂಡು ಮಕ್ಕಳು, ಎರಡು ಜನ ಹೆಣ್ಣು ಮಕ್ಕಳು. ಸದರಿ ಗುರುಲಿಂಗ ರವರ ಹೆಂಡತಿ ಹೆಸರು ಗಂಗೂಬಾಯಿ. ಸದರಿ ಗಂಗೂಬಾಯಿಯ ತಂದೆ ತಾಯಿಯ ಹೆಸರು ಗೊತ್ತಿಲ್ಲ. ಅವರು ತಪ್ಪಾರಟ್ಟಿ ಗ್ರಾಮದವರು. ಸದರಿ ಗಂಗೂಬಾಯಿ ಯಾವಾಗ ಮರಣ ಹೊಂದಿರುತ್ತಾಳೆ ಎಂದರೆ ಗೊತ್ತಿಲ್ಲ . ಸುಮಾರು ವರ್ಷಗಳು ಆಗಿವೆ. ಆಕೆ ನಾನು ಜನಿಸುವ ಮೊದಲೇ ಮರಣ ಹೊಂದಿರಬಹುದು. ಗುರುಲಿಂಗರವರಿಗೆ ಯಾವ ಮನೆ ಅವರ ಕುಟುಂಬದಿಂದ ಬಂದಿರುತ್ತದೆ ಎಂದರೆ ಸಾಕ್ಷಿ ಎರಡು ಮನೆ ಇವೆ ಎಂದು ನುಡಿಯುತ್ತಾರೆ. ಗುರುಲಿಂಗ ತನ್ನ ಹೆಂಡತಿ ಜೊತೆಗೆ 1ನೇ ಪ್ರತಿವಾದಿ ವಾಸವಿರುವ ಮನೆಯಲ್ಲಿಯೇ ಇದ್ದರು. ಸದರಿ ಗುರುಲಿಂಗರವರು ಮರಣ ಹೊಂದಿ ಸುಮಾರು 27-28 ವರ್ಷಗಳು ಆಗಿರಬಹುದು. ಸದರಿ ಗುರುಲಿಂಗ 2ನೇ ಮದುವೆ ಆಗಿರುತ್ತಾರೆ ಎಂದರೆ ಗೊತ್ತಿಲ್ಲ. ಗಂಗೂಬಾಯಿ ತನ್ನ ಮಕ್ಕಳು ಚಿಕ್ಕವರು ಇದ್ದಾಗಲೇ ಮರಣ ಹೊಂದಿದ ಕಾರಣ ಅವರನ್ನು ನೋಡಿಕೊಳ್ಳುವ ಸಲುವಾಗಿ ಗುರುಲಿಂಗರವರು ಗೌರಾಬಾಯಿಯನ್ನು ಮದುವೆ ಆಗಿರುತ್ತಾರೆ ಎಂದರೆ ಗೊತ್ತಿಲ್ಲ. ಗುರುಲಿಂಗ ವಾಸ ಇದ್ದ ಮನೆ ಎರಡು ಮಹಡಿಗಳಲ್ಲಿ ಇದೆ ಎಂದರೆ ಹೌದು. ಗುರುಲಿಂಗ ಮತ್ತು ತನ್ನ 2ನೇ ಪತ್ನಿ ಗೌರಾಬಾಯಿ 1ನೇ ಪ್ರತಿವಾದಿ ಜೊತೆಗೆ ಕೊನೆಯವರು ವಾಸ ಇದ್ದರು ಎಂದರೆ ಹೌದು. ಈಗಲೂ ಸಹ ಸದರಿ ಗೌರಾಬಾಯಿ 1ನೇ ಪ್ರತಿವಾದಿಯೊಂದಿಗೆ ಒಟ್ಟಿಗೆ ವಾಸ ಇದ್ದಾರೆ ಎಂದರೆ ಸಾಕ್ಷಿ ಅದೇ ಮನೆಯಲ್ಲಿ ಬೇರೆ ಇದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ

ಮನೆಯಲ್ಲಿ 1 ನೇ ಪ್ರತಿವಾದಿ ಭಾರತಿ ಹಾಗೂ ಮಕ್ಕಳಾದ ಪ್ರತಿವಾದಿ ನಂಬರ 2 ಮತ್ತು 3 ರವರು ಒಟ್ಟಿಗೆ ವಾಸ ಇದ್ದಾರೆ ಎಂದರೆ ಹೌದು.

ದಾವಾ ಆಸ್ತಿ ಒಟ್ಟು 8ವರೆ ಎಕರೆ ಇದೆ. ಗುರುಲಿಂಗರವರ ಮನೆತನಕ್ಕೆ 25 ಎಕರೇ ಜಮೀನು ಇತ್ತು. ಸದರಿ 25 ಎಕರೆ ಜಮೀನಿನ ಸರ್ವೆ ನಂಬರನ್ನು ಹೇಳಲು ಬರುವುದಿಲ್ಲ. ಯಾವ ಯಾವ ಹೊಲಗಳು ಎಷ್ಟು ಎಷ್ಟು ವಿಸ್ತೀರ್ಣ ಇವೆ ಎಂದು ಅಷ್ಟಾಗಿ ಹೇಳಲು ಬರುವುದಿಲ್ಲ. ಗುರುಲಿಂಗರವರ ಮನೆತನಕ್ಕೆ ಎಲ್ಲಾ ಆಸ್ತಿಗಳು ಹಿರಿಯರಿಂದ ಬಂದಿರುತ್ತವೆ. ಗುರುಲಿಂಗ ರವರಿಗೆ ಇಬ್ಬರು ಜನ ತಮ್ಮಂದಿರು ಇದ್ದಾರೆ. ಅವರುಗಳೆಂದರೆ ಶಿವಲಿಂಗ ಕುಡಚಿ ಮತ್ತು ಬಾಳು ಕುಡಚಿ. ಗುರುಲಿಂಗ ರವರ ತಮ್ಮಂದಿರಿಗೆ ಎಷ್ಟು ಎಕರೆ ಜಮೀನು ಹೋಗಿರುತ್ತದೆ ಎಂದು ಗೊತ್ತಿಲ್ಲ. ಸದರಿ ಜಮೀನುಗಳು ಮತ್ತು ದಾವಾ ಆಸ್ತಿಗಳು ಹತ್ತಿರದಲ್ಲಿವೆ . ಸದರಿ ಗುರುಲಿಂಗರವರ ಹೆಸರಿನಲ್ಲಿ ಮೂರು ಮನೆಗಳು ಇದ್ದವು. 1 ಹಾಗೂ 6 ಮತ್ತು 7 ನೇ ಪ್ರತಿವಾದಿಗೆ ಯಾವ ಯಾವ ಭಾಗ ಹೋಗಿರುತ್ತವೆ ಎಂದರೆ ಸಾಕ್ಷಿಯೂ ಅವರು ಮೂರು ಮನೆಗಳನ್ನು ಸಮನಾಗಿ ಭಾಗ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

ಪ್ರ.ಹಿ.ದಿ.ನ್ಯಾಯಾಧೀಶರು, ಚಿಕ್ಕೋಡಿ